# ಶ್ರೀರಾಮಕೃಷ್ಣರು ಮತ್ತು ಅವರ ಗುರುಗಳು

ಡಾ. ಇ. ವಸಂತಕುಮಾರ್

ಶ್ರೀರಾಮಕೃಷ್ಣರು ಅವತಾರಪುರುಷರು; ಮಹಾ ಆಚಾರ್ಯರೆಂದು ಪರಿಗಣಿಸಲ್ಪಟ್ಟಿರುವವರು. ಅವರೇ ಅನೇಕರಿಗೆ ಗುರುಗಳು; ಗುರುಗಳಿಗೆ ಆದರ್ಶಪ್ರಾಯರು. ಅವರ ಹೆಸರನ್ನು ಜಪಿಸಿ ಅಸಂಖ್ಯ ಜನರು ಉದ್ಧಾರವಾಗಿರುವರು. ಅವರ ಹೆಸರಿನಲ್ಲಿ ತ್ಯಾಗಿಗಳಾಗಿ ಆಧ್ಯಾತ್ಮಿಕ ಜೀವನವನ್ನು ಕೈಗೊಂಡವರು ಧನ್ಯರಾಗಿರುವರು. ಇಂತಹವರಿಗೆ ಗುರುಗಳು ಇರಲು ಸಾಧ್ಯವೇ ಮತ್ತು ಇವರು ಅವರಿಗೆಲ್ಲ ಎಂತಹ ಶಿಷ್ಯರಾಗಿದ್ದರು ಎಂಬುದು ಕುತೂಹಲಕಾರಿಯಾಗಿರುವುದು.


## ಶ್ರೀರಾಮಕೃಷ್ಣರ ವೈಶಿಷ್ಟ್ಯತೆ

ಶ್ರೀರಾಮಕೃಷ್ಣರ ಜೀವನದಲ್ಲಿ ಎಲ್ಲ ಧರ್ಮಗಳ, ಎಲ್ಲ ತತ್ತ್ವಗಳ, ಎಲ್ಲ ಯೋಗಗಳ ಮತ್ತು ಎಲ್ಲ ಭಾವಗಳ ಸಂಗಮವನ್ನು ನೋಡಬಹುದು. ಇವರ ಸಾಧನೆಗಳ ಬಗ್ಗೆ ಕೆಲವು ವಿಸ್ಮಯಕಾರಿಯಾದ ಅಂಶಗಳನ್ನು ಗಮನಿಸಬಹುದು. ಇವರ ಸಾಧನೆ ಗುರುಗಳಿಲ್ಲದೆ ಸ್ವಯಂಪ್ರೇರಿತವಾಗಿ ಪ್ರಾರಂಭವಾಗುವುದು. ಗುರುಗಳು ತಾವಾಗಿ ಇವರಿದ್ದ ಕಡೆ ಬರುವರು. ಅವರುಗಳ ಮಾರ್ಗದರ್ಶನದಲ್ಲಿ ಶ್ರೀರಾಮಕೃಷ್ಣರು ಒಂದಾದಮೇಲೊಂದರಂತೆ ಹಲವು ಸಾಧನೆಗಳನ್ನು ಕೈಗೆತ್ತಿಕೊಳ್ಳುವರು. ಶ್ರೀರಾಮಕೃಷ್ಣರು ಅತ್ಯಲ್ಪ ಕಾಲದಲ್ಲಿ ಸಿದ್ಧಿಯನ್ನು ಪಡೆಯುವುದನ್ನು ಕಂಡು ಗುರುಗಳು ಚಕಿತರಾಗುವರು. ಅವರ ವ್ಯಕ್ತಿತ್ವಕ್ಕೆ ಆಕರ್ಷಿತರಾಗುವರು. ಇಂತಹ ದುರ್ಲಭ ಮೇಧಾವಿ ಶಿಷ್ಯರ ಮೇಲಣ ಪ್ರೀತಿಯಿಂದ, ತಾವು ಸಾಮಾನ್ಯವಾಗಿ ಇರುವುದಕ್ಕಿಂತ ಹೆಚ್ಚು ಕಾಲ ಶ್ರೀರಾಮಕೃಷ್ಣರ ಸಂಗದಲ್ಲಿ ಕಳೆಯುವರು. ನಂತರ, ಅತ್ಯಂತ ಆಶ್ಚರ್ಯಕರ ರೀತಿಯಲ್ಲಿ, ಅವರಿಂದ ಒಂದು ಅಮೂಲ್ಯವಾದ ಪಾಠವನ್ನು ಕಲಿತುಕೊಂಡು, ತಮ್ಮ ನ್ಯೂನತೆಯಿಂದ ಪಾರಾಗಿ, ಧನ್ಯತೆಯಿಂದ ಹೊರಟುಹೋಗುವರು.

## ಪ್ರಥಮ ದೀಕ್ಷಾಗುರು ಕೇನರಾಮ ಭಟ್ಟಾಚಾರ್ಯ

ಶ್ರೀರಾಮಕೃಷ್ಣರಿಗೆ ಸುಮಾರು ಇಪ್ಪತ್ತು ವರ್ಷ ವಯಸ್ಸಾಗಿದ್ದಾಗ ದಕ್ಷಿಣೇಶ್ವರದ ದೇವಸ್ಥಾನದಲ್ಲಿ ಕಾಳಿಮಾತೆಯ

> ಶ್ರೀರಾಮಕೃಷ್ಣರು ಅನೇಕ ಮತವಿಧಾನಗಳಲ್ಲಿ ಸಾಧನೆಯನ್ನು ಮಾಡಿದರು. ಅವುಗಳಲ್ಲಿ ಮಾರ್ಗದರ್ಶನ ನೀಡಿದ ಗುರುಗಳ ನಡುವೆ ಅವರು ಇರಿಸಿಕೊಂಡಿದ್ದ ಅಪೂರ್ವ ಬಾಂಧವ್ಯ ಅವರ ವ್ಯಕ್ತಿತ್ವದ ಒಂದು ಪ್ರಮುಖ ಅಂಶ. ಇದನ್ನು ವಿವರಿಸಿರುವ ಮಾನ್ಯ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕರು, ಆಶ್ರಮದ ಭಕ್ತರು.



ಪೂಜೆ ಮಾಡಬೇಕಾಗಿ ಬಂದುದರಿಂದ ಕೇನರಾಮ ಭಟ್ಟಾಚಾರ್ಯರೆಂಬುವರಿಂದ ಶಕ್ತಿಮಂತ್ರದ ದೀಕ್ಷೆಯನ್ನು ಪಡೆದರು. ಬಹುಶಃ ಶ್ರೀ ಕೇನರಾಮರೇ ಶ್ರೀರಾಮಕೃಷ್ಣರ ಪ್ರಥಮ ದೀಕ್ಷಾಗುರುಗಳು. ಶ್ರೀ ಕೇನರಾಮರು ಶಕ್ತಿಮಂತ್ರದ ಸಾಧಕರು ಮತ್ತು ಶಾಕ್ತಶಾಸ್ತ್ರಪಾರಂಗತರಾಗಿದ್ದರು, ದಕ್ಷಿಣೇಶ್ವರಕ್ಕೆ ಆಗಾಗ ಹೋಗುತ್ತಿದ್ದರು. ಇವರು ಶಕ್ತಿಮಂತ್ರವನ್ನು ಶ್ರೀರಾಮಕೃಷ್ಣರ ಕಿವಿಯಲ್ಲಿ ಹೇಳಿದ ಕೂಡಲೇ ಶ್ರೀರಾಮಕೃಷ್ಣರು ಗಾಢ ಧ್ಯಾನದಲ್ಲಿ ಮುಳುಗಿದರು. ಸಾಮಾನ್ಯವಾಗಿ ಮಂತ್ರಶಕ್ತಿ ಜಾಗೃತವಾಗಬೇಕಾದರೆ ಎಷ್ಟೋ ಕಾಲ ಸಾಧನೆ ಮಾಡಬೇಕಾಗುವುದು. ಆದರೆ ಶ್ರೀರಾಮಕೃಷ್ಣರ ಮನಸ್ಸು ಒಣಗಿದ ಮದ್ದಿನಂತೆ ಇತ್ತು, ಮಂತ್ರದ ಕಿಡಿ ತಾಕಿದ ಕೂಡಲೆ ಅದು ಉದ್ದೀಪನವಾಯಿತು.

## ಭಗವತ್ಸಾಕ್ಷಾತ್ಕಾರ

ಶಕ್ತಿಮಂತ್ರೋಪದೇಶವಾದ ಮೇಲೆ ಶ್ರೀರಾಮಕೃಷ್ಣರು ದಕ್ಷಿಣೇಶ್ವರದ ದೇವಾಲಯದಲ್ಲಿ ಕಾಳಿಮಾತೆಯನ್ನು ಹಗಲು ಅತ್ಯಂತ ಶ್ರದ್ಧೆಯಿಂದ ಪೂಜಿಸುತ್ತಿದ್ದರು. ರಾತ್ರಿಯೆಲ್ಲ ದಟ್ಟ

ಕಾನನದಲ್ಲಿ ಧ್ಯಾನದಲ್ಲಿ ತೊಡಗಿರುತ್ತಿದ್ದರು. ವ್ಯಾಕುಲತೆಯಿಂದ ಭಗವತಿಯ ದರ್ಶನಕ್ಕಾಗಿ ಅಳುತ್ತಾ ಪ್ರಾರ್ಥಿಸುತ್ತಿದ್ದರು. ತಾಯಿಯನ್ನು ಕಾಣದ ಜೀವನದಿಂದ ಪ್ರಯೋಜನವೇನು ಎಂದು ಯೋಚಿಸುತ್ತ ಗರ್ಭಗುಡಿಯಲ್ಲಿ ಕಾಳಿಗೆ ಬಲಿಕೊಡಲು ಇಟ್ಟಿದ್ದ ಕತ್ತಿಯಿಂದ ತಮ್ಮ ಶಿರವನ್ನು ಈಡಾಡಲು ಮುಂದಾದರು. ಆಗ ಕಾಳಿಮಾತೆಯಿಂದ ಹೊರಟ ಜ್ಯೋತಿಪ್ರವಾಹ ಇವರನ್ನು ಆವರಿಸಿತು; ಪ್ರಜ್ಞಾಹೀನರಾಗಿ ಕೆಳಗೆ ಬಿದ್ದರು. ಆನಂದ ಪ್ರವಾಹ ದಲ್ಲಿ ಎಷ್ಟೋ ಕಾಲ ಇದ್ದರು. ಪ್ರಜ್ಞೆ ಬಂದ ಮೇಲೆ, ಅವರ ದುಗುಡ ಮಾಯವಾಗಿತ್ತು, ಮನಸ್ಸು ಆನಂದದಿಂದ ತುಂಬಿ ಹೋಗಿತ್ತು. ಭಗವತಿಯ ಭಾವೋನ್ಮಾದ ಅವರನ್ನು ಆವರಿಸಿತು.

### ಭೈರವಿ ಬ್ರಾಹ್ಮಣಿ

ಒಂದು ದಿನ ಬೆಳಗ್ಗೆ ಶ್ರೀರಾಮಕೃಷ್ಣರು ಪೂಜೆಗೆ ಹೂವನ್ನು ಬಿಡಿಸುತ್ತಿದ್ದಾಗ ಕಾವಿ ಉಡುಗೆಯನ್ನು ಧರಿಸಿದ್ದ ಮಹಿಳೆ ಯೊಬ್ಬಳು ಗಂಗಾನದಿಯ ದಡದಲ್ಲಿ ದೋಣಿಯಿಂದ ಇಳಿದಳು. ಆಕೆಯನ್ನು ಕರೆತರುವಂತೆ ಶ್ರೀರಾಮಕೃಷ್ಣರು ಹೃದಯನಿಗೆ ಹೇಳಿದರು. ಆಕೆಯ ಹೆಸರು ಯೋಗೀಶ್ವರಿ. ಆದರೆ ಅವಳನ್ನು, ಭೈರವಿಯಂತೆ ಉಡುಗೆ ತೊಟ್ಟಿದ್ದುದರಿಂದಲೋ ಏನೋ, ಭೈರವಿ ಬ್ರಾಹ್ಮಣಿ ಎಂದು ಕರೆಯುತ್ತಿದ್ದರು. ಆಕೆ ಪೂರ್ವ ಬಂಗಾಳದ ಜೆಸ್ಸೂರು ಜಿಲ್ಲೆಗೆ ಸೇರಿದವಳು. ಹೃದಯ ಕರೆದೊಡನೆ ಆಕೆ ಶ್ರೀರಾಮಕೃಷ್ಣರ ಕೋಣೆಗೆ ಬಂದಳು. ಅವರನ್ನು ಕಂಡೊಡನೆ, "ಓ, ನೀನು ಇಲ್ಲಿರುವೆಯಾ? ಬಹಳ ದಿನಗಳಿಂದ ನಿನಗಾಗಿಯೇ ಹುಡುಕುತ್ತಿದ್ದೆ. ಭಗವತಿ ನಿನ್ನ ಎಲ್ಲ ವಿಷಯವನ್ನೂ ನನಗೆ ತಿಳಿಸಿರುವಳು" ಎಂದು ಹೇಳಿದಳು. ಅವರಿಬ್ಬರ ಪರಸ್ಪರ ಆಕರ್ಷಣೆ ತಾಯಿ–ಮಗುವಿನ ಪ್ರೀತಿಯಂತೆ ಇತ್ತು. ಆಗ ಶ್ರೀರಾಮಕೃಷ್ಣರ ವಯಸ್ಸು ಸುಮಾರು ಇಪ್ಪತ್ತೈದು ವರ್ಷಗಳು.

### ಹುಚ್ಚಲ್ಲ, ಮಹಾಭಾವ

ಸ್ವಲ್ಪ ಸಮಯದ ನಂತರ ಶ್ರೀರಾಮಕೃಷ್ಣರು ತಮ್ಮ ಸಾಧನೆ, ತಮಗೆ ಆದ ಅನುಭವಗಳು, ತಮಗೆ ಆಗುವ ಅನೇಕ ದರ್ಶನ ಗಳು ಮುಂತಾದವನ್ನೆಲ್ಲ ಭೈರವಿ ಬ್ರಾಹ್ಮಣಿಗೆ ತಿಳಿಸಿದರು. ಭೈರವಿ ಬ್ರಾಹ್ಮಣಿ ತಾಂತ್ರಿಕ ಸಾಧನೆಯಲ್ಲಿ ನುರಿತ ಸಾಧಕಿಯಾಗಿದ್ದಳು. ಅಲ್ಲದೆ ಅನೇಕ ಗ್ರಂಥಗಳನ್ನು ಓದಿ ಶಾಸ್ತ್ರಪಾರಂಗತಳಾಗಿದ್ದಳು. "ನನ್ನನ್ನು ಜನ ಹುಚ್ಚನೆಂದು ಕರೆಯುವರು. ನಾನು ತಾಯಿಯನ್ನು ಹಗಲಿರುಳು ಚಿಂತಿಸಿದುದಕ್ಕೆ ಅವಳು ಕೊಟ್ಟಿರುವ ಫಲವೇ ಇದು?" ಎಂದು ಶ್ರೀರಾಮಕೃಷ್ಣರು ಭೈರವಿ ಬ್ರಾಹ್ಮಣಿಯ ಬಳಿ ನೊಂದುಕೊಂಡು ಹೇಳಿದರು. ಭೈರವಿ ಬ್ರಾಹ್ಮಣಿ ಬಹು ಪ್ರೀತಿ ವಿಶ್ವಾಸಗಳಿಂದ ಹೇಳಿದಳು: "ನಿನ್ನನ್ನು ಹುಚ್ಚನೆಂದು ಕರೆಯು ವವರು ಯಾರಪ್ಪ? ನಿನಗೆ ಬಂದಿರುವುದು ಹುಚ್ಚಲ್ಲ. ಅದು ಮಹಾಭಾವ. ಇದು ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ. ಇದರ ಬಗ್ಗೆ ಭಕ್ತಿಶಾಸ್ತ್ರಗಳಲ್ಲಿ ಉಲ್ಲೇಖವಿದೆ. ಇದು ರಾಧೆಗೆ ಉಂಟಾಗಿತ್ತು ಮತ್ತು ಗೌರಾಂಗನಿಗೆ (ಶ್ರೀಚೈತನ್ಯದೇವ) ಪ್ರಾಪ್ತ ವಾಗಿತ್ತು. ಯಾರು ದೇವರ ಬಗ್ಗೆ ಅತ್ಯಂತ ವ್ಯಾಕುಲರಾಗುವರೋ ಅವರಿಗೆ ಮಾತ್ರ ಇದು ಲಭಿಸುವುದು." ಶ್ರೀರಾಮಕೃಷ್ಣರಿಗೂ, ಚೈತನ್ಯನಿಗೂ ಅನೇಕ ಸಾಮ್ಯತೆಗಳಿರುವುದನ್ನು ಭೈರವಿ ಕಂಡಳು.

ಶ್ರೀರಾಮಕೃಷ್ಣರ ಸಾಧನೆ, ದಿವ್ಯ ಅನುಭವಗಳು, ದೇಹ ಲಕ್ಷಣಗಳು ಇವನ್ನೆಲ್ಲ ಗಮನಿಸಿದ ಮತ್ತು ಶಾಸ್ತ್ರಜ್ಞಾನದ ಬೆಳಕಿನಲ್ಲಿ ವಿಶ್ಲೇಷಿಸಿದ ಭೈರವಿ ಬ್ರಾಹ್ಮಣಿ, ಶ್ರೀರಾಮಕೃಷ್ಣರು ಕೇವಲ ಸಾಧಕರು ಅಥವಾ ಸಿದ್ಧರು ಮಾತ್ರವಲ್ಲ, ಜಗತ್ತಿನ ಉದ್ಧಾರಕ್ಕಾಗಿ ಬಂದ ಅವತಾರಪುರುಷರು ಎಂಬ ನಿರ್ಧಾರಕ್ಕೆ ಬಂದಳು. ಇದನ್ನು ಸಮರ್ಥಿಸುವ ಸಲುವಾಗಿ ಪಂಡಿತರ ಸಭೆಯನ್ನು ಕರೆಯುವಂತೆ ಮಥುರನಾಥನಿಗೆ ಹೇಳಿದಳು. ಅಂದಿನ ಕಾಲದಲ್ಲಿ ಸಾಧಕರು ಮತ್ತು ಪಂಡಿತರೆಂದು ಹೆಸರಾದ ವೈಷ್ಣವ ಚರಣ ಮತ್ತು ಗೌರೀಕಾಂತ ತರ್ಕಭೂಷಣ ಎಂಬ ಇಬ್ಬರು ಪಂಡಿತರು ದಕ್ಷಿಣೇಶ್ವರಕ್ಕೆ ಬಂದರು. ಸಭೆಯಲ್ಲಿ ಭೈರವಿ ಬ್ರಾಹ್ಮಣಿ, ತಾನು ಶ್ರೀರಾಮಕೃಷ್ಣರಲ್ಲಿ ಪ್ರತ್ಯಕ್ಷವಾಗಿ ಕಂಡಿದುದನ್ನು ವಿವರಿಸಿ, "ಇವರು ಅವತಾರಪುರುಷರು, ಇದಕ್ಕೆ ಶಾಸ್ತ್ರಾಧಾರವಿದೆ. ಇದನ್ನು ನೀವು ಒಪ್ಪದಿದ್ದರೆ ಅದಕ್ಕೆ ಕಾರಣಗಳನ್ನು ಕೊಡಿ" ಎಂದು ತನ್ನ ವಾದಗಳನ್ನು ಮುಂದಿಟ್ಟಳು. ಅಲ್ಲಿ ಶ್ರೀರಾಮಕೃಷ್ಣರೂ ಇದ್ದರು. ಎಲ್ಲರ ವಾದಗಳನ್ನೂ ಕೇಳಿಸಿಕೊಳ್ಳುತ್ತ ಸಣ್ಣ ಮಗು ವಿನಂತೆ ಬಾಧಿತರಾಗದೆ ಇದ್ದರು. ಅವರ ಅನುಭವಗಳನ್ನು ಅವರ ಬಾಯಿಂದಲೇ ಕೇಳಬೇಕೆಂದು ಇಚ್ಛಿಸಿದಾಗ ಮಾತ್ರ ಅವರು ವಿವರಿಸುತ್ತಿದ್ದರು. ಚರ್ಚೆಗಳೆಲ್ಲ ಮುಗಿದ ಮೇಲೆ ವೈಷ್ಣವ ಚರಣ, ಶ್ರೀರಾಮಕೃಷ್ಣರನ್ನು ಅವತಾರ ಎಂದು ಸಮರ್ಥಿಸಿ, "ಪರಮಪ್ರೇಮದ ಮಹಾಭಾವ ನಿಮ್ಮಲ್ಲಿ ಸಂಪೂರ್ಣವಾಗಿ ವ್ಯಕ್ತವಾಗಿದೆ" ಎಂದು ಹೇಳಿದನು. ಗೌರಿ ಪಂಡಿತನಾದರೋ "ನೀವು ಪ್ರಪಂಚದ ಅನಂತ ಆಧ್ಯಾತ್ಮಿಕ ನಿಧಿ" ಎಂದು ಹೇಳಿ ದನು. ಶ್ರೀರಾಮಕೃಷ್ಣರು, "ಇದೆಲ್ಲ ನೀವು ಹೇಳುತ್ತಿರುವುದು. ನನಗೊಂದೂ ಗೊತ್ತಿಲ್ಲ. ಅವತಾರವೋ ಅಲ್ಲವೋ, ನಾನು ಹುಚ್ಚನಲ್ಲ ಎಂದಾಯಿತಲ್ಲ, ಅಷ್ಟೇ ಸಾಕು" ಎಂದು ನಕ್ಕರು. ಭೈರವಿ ಬ್ರಾಹ್ಮಣಿ ಶ್ರೀರಾಮಕೃಷ್ಣರನ್ನು ಅವತಾರ ಎಂದು ಘೋಷಿಸಿದ ನಂತರ ಅವರ ಕೀರ್ತಿ ಹಬ್ಬಿತು.

### ತಾಂತ್ರಿಕ ಸಾಧನೆ

ಶ್ರೀರಾಮಕೃಷ್ಣರು ಗುರುಗಳೊಬ್ಬರ ಮಾರ್ಗದರ್ಶನದಲ್ಲಿ ಶಾಸ್ತ್ರೋಕ್ತವಾಗಿ ಮಾಡಿದ ಮೊದಲ ಸಾಧನೆ ಇದು. ಭೈರವಿ ಬ್ರಾಹ್ಮಣಿ, ತಾಂತ್ರಿಕ ಸಾಧನೆಯನ್ನು ಮಾಡುವಂತೆ ಹೇಳಿದಾಗ ಶ್ರೀರಾಮಕೃಷ್ಣರು ಭಗವತಿಯನ್ನು ಕೇಳಿದರು. ಭಗವತಿ, ತನ್ನ ಇಚ್ಛೆಯಂತೆಯೇ ಶ್ರೀರಾಮಕೃಷ್ಣರಿಂದ ತಾಂತ್ರಿಕ ಸಾಧನೆಯನ್ನು ಮಾಡಿಸಲು ಭೈರವಿ ಬ್ರಾಹ್ಮಣಿ ಬಂದಿರುವುದಾಗಿ ತಿಳಿಸಿದಳು. ಆಗ ಶ್ರೀರಾಮಕೃಷ್ಣರು ಈ ಸಾಧನೆಯನ್ನು ಮಾಡಲು ಒಪ್ಪಿದರು.

ಆಧ್ಯಾತ್ಮಿಕ ಸಾಧನೆಗಳಲ್ಲಿ ತಾಂತ್ರಿಕ ಸಾಧನೆ ಅಪಾಯಕಾರಿ

ಯಾದುದು. ಏಕೆಂದರೆ, ಯಾವ ಪ್ರಲೋಭನೆಗಳು ಸಾಧಕರನ್ನು ಆಧ್ಯಾತ್ಮಿಕ ಜೀವನದಲ್ಲಿ ಭ್ರಷ್ಟರನ್ನಾಗಿ ಮಾಡುವುವೋ ಅವುಗಳ ಮೂಲಕವೇ ಭಗವತಿಯನ್ನು ಕಾಣಬೇಕು. ಅರವತ್ತುನಾಲ್ಕು ತಂತ್ರಗಳಲ್ಲಿ ಹೇಳಿರುವ ಸಾಧನೆಗಳೆಲ್ಲವನ್ನೂ ಭೈರವಿ ಬ್ರಾಹ್ಮಣಿ ಶ್ರೀರಾಮಕೃಷ್ಣರಿಂದ ಮಾಡಿಸಿದಳು. ಸಾಧನೆಗೆ ಬೇಕಾಗುವ ಪರಿಕರಗಳೆಲ್ಲವನ್ನೂ ಹಗಲು ಕಷ್ಟಪಟ್ಟು ಸಂಗ್ರಹಿಸುತ್ತಿದ್ದಳು. ರಾತ್ರಿ ಸಾಧನೆಯನ್ನು ಮಾಡಿಸುತ್ತಿದ್ದಳು.

## ಜಟಾಧಾರಿ

ಶ್ರೀರಾಮಕೃಷ್ಣರ ತಾಂತ್ರಿಕ ಸಾಧನೆ ಸುಮಾರು ಮೂರು ವರ್ಷಗಳಿಗೂ ಹೆಚ್ಚು ಕಾಲ ನಡೆಯಿತು. ಭೈರವಿ ಬ್ರಾಹ್ಮಣಿ ದಕ್ಷಿಣೇಶ್ವರದಲ್ಲಿರುವಾಗಲೇ ಜಟಾಧಾರಿ ಎಂಬ ಪರಿವ್ರಾಜಕ ಸಂನ್ಯಾಸಿ ಬಂದನು. ಆತ ಶ್ರೀರಾಮಚಂದ್ರನನ್ನು ಬಾಲರಾಮ ನಂತೆ ಉಪಾಸಿಸಿ, ವಾತ್ಸಲ್ಯಭಾವದ ಸಾಧನೆಯಲ್ಲಿ ಸಿದ್ಧಿಯನ್ನು ಪಡೆದಿದ್ದನು. ಶಿಶು-ರಾಮನನ್ನು 'ರಾಮಲಾಲ' ಎಂದು ಕರೆಯುತ್ತಿದ್ದನು. ಸಾಧನೆಯಲ್ಲಿ ಮುಂದುವರಿದಂತೆ ರಾಮಲಾಲ ಅವನಿಗೆ ಸದಾ ಕಾಣಿಸಿಕೊಳ್ಳುತ್ತ ಅವನ ಸಂಗಾತಿಯಾದನು. ರಾಮಲಾಲನ ಲಾಲನೆ, ಪಾಲನೆ, ಪೋಷಣೆಯಲ್ಲಿ ಜಟಾಧಾರಿ ತನ್ನನ್ನು, ಪ್ರಪಂಚವನ್ನು ಸಂಪೂರ್ಣವಾಗಿ ಮರೆತಿದ್ದ. ರಾಮ ಲಾಲನ ಸಂಗ ಮತ್ತು ಪ್ರೀತಿಯನ್ನು ಹಗಲೂ ರಾತ್ರಿ ಎಡೆಬಿಡದೆ ಅನುಭವಿಸುತ್ತಿದ್ದ. ಈ ವಿಷಯನ್ನು ಅವನು ಯಾರಿಗೂ ತಿಳಿಸಿರಲಿಲ್ಲ. ಆದರೆ ಈ ರಹಸ್ಯ ಶ್ರೀರಾಮಕೃಷ್ಣರಿಗೆ ಸ್ಪಷ್ಟವಾಗಿ ಕಾಣುತ್ತಿತ್ತು.

ಜಟಾಧಾರಿಯೊಂದಿಗೆ ಶ್ರೀರಾಮಕೃಷ್ಣರ ಸಖ್ಯ ಗಾಢವಾಯಿತು. ಜಟಾಧಾರಿಗೆ ವಸ್ತ್ರ ಮುಂತಾದುವನ್ನೆಲ್ಲ ಕೊಟ್ಟು ಶ್ರೀರಾಮಕೃಷ್ಣರು ಸೇವೆ ಮಾಡಿದರು. ಜಟಾಧಾರಿ ಶ್ರೀರಾಮಕೃಷ್ಣರಿಗೆ ರಾಮಮಂತ್ರ ವನ್ನು ಕೊಟ್ಟನು. ಕ್ರಮೇಣ ರಾಮಲಾಲ ಶ್ರೀರಾಮಕೃಷ್ಣರೊಡನೆ ಹೆಚ್ಚು ಕಾಲ ಕಳೆಯಲಾರಂಭಿಸಿದನು. ಶ್ರೀರಾಮಕೃಷ್ಣರಿಗೆ ರಾಮಲಾಲನ ಮೇಲೆ ವಾತ್ಸಲ್ಯಭಾವ ಉಂಟಾಯಿತು. ಒಮ್ಮೆ ರಾಮಲಾಲನ ಮೇಲೆ ಅವರ ಏಕಾಗ್ರತೆಯನ್ನೆಲ್ಲ ಕೇಂದ್ರೀಕರಿಸಿ ನೋಡಿದಾಗ ಅವರಿಗೆ ರಾಮನ ದರ್ಶನವಾಯಿತು. ರಾಮ ಲಾಲನು ಆಟವಾಡುತ್ತ ರಾಮಕೃಷ್ಣರೊಂದಿಗೆ ಇದ್ದುಬಿಡುತ್ತಿದ್ದನು. ಇದರಿಂದ ಜಟಾಧಾರಿಗೆ ದುಃಖವಾಗುತ್ತಿತ್ತು. ಆದರೆ ರಾಮ ಲಾಲನು ಶ್ರೀರಾಮಕೃಷ್ಣರೊಂದಿಗೆ ಆನಂದದಿಂದ ಇರುವುದನ್ನು ಕಂಡು ಸಂತೋಷವಾಗುತ್ತಿತ್ತು. ಕೆಲವು ತಿಂಗಳಾದ ಬಳಿಕ ಜಟಾಧಾರಿ ದಕ್ಷಿಣೇಶ್ವರದಿಂದ ಹೊರಟನು. ರಾಮಲಾಲನು ಜಟಾಧಾರಿಯೊಂದಿಗೆ ಬರುವಂತಿರಲಿಲ್ಲ. ತನಗೆ ಪ್ರಿಯವಾದ ರೂಪದಲ್ಲಿ ದರ್ಶನವಿತ್ತು, ಒಡನಾಡಿ, ಅವನ ಹೃದಯದಲ್ಲಿ ದಿವ್ಯಪ್ರೇಮ ಸ್ಫುರಿಸುವಂತೆ ಮಾಡಿ ಧನ್ಯತೆಯನ್ನು ನೀಡಿದುದಕ್ಕಾಗಿ ತನ್ನ ಆರಾಧ್ಯದೈವ ಶ್ರೀರಾಮನಿಗೆ ಅವನು ವಂದಿಸಿದನು. ಅಶ್ರುಪೂರ್ಣನಾಗಿ ರಾಮಲಾಲನನ್ನು ಶ್ರೀರಾಮಕೃಷ್ಣರೊಡನೆ ಬಿಟ್ಟು ಜಟಾಧಾರಿಯು ದಕ್ಷಿಣೇಶ್ವರದಿಂದ ನಿರ್ಗಮಿಸಿದನು.

> ಸತ್ವದ ಪರಂಜ್ಯೋತಿಯಿಂದ ಯಾರು ಪರಿಶುದ್ಧರಾಗಿರುವರೋ ಅವರೇ ನಿಜವಾದ ಗುರುಗಳು... ಯಾರು ದೇವರೊಂದಿಗೆ ಹಲವು ಭಾವಗಳಲ್ಲಿ ಅಂದರೆ ದಾಸನಂತೆ, ಸ್ನೇಹಿತನಂತೆ, ಪ್ರೇಮಿಯಂತೆ ತನ್ಮಯನಾಗಿ ಐಕ್ಯನಾಗುವನೋ, ಅವನು ಮಾತ್ರ ದೇವರ ಮಹಿಮೆಯನ್ನು ಹೇಳಬಲ್ಲ.
>
> –ಶ್ರೀರಾಮಕೃಷ್ಣ

## ತೋತಾಪುರಿ

ಇದುವರೆಗೆ ಶ್ರೀರಾಮಕೃಷ್ಣರು ಮಾಡಿದ ಸಾಧನೆಗಳೆಲ್ಲ ದೇಶ-ಕಾಲ-ನಿಮಿತ್ತಗಳಿಗೆ ಸೀಮಿತವಾದುವು. ಶ್ರೀರಾಮಕೃಷ್ಣರು ಇಷ್ಟಕ್ಕೆ ತೃಪ್ತರಾಗಲಿಲ್ಲ. ಸಮುದ್ರದ ತೀರದಲ್ಲಿ ವಾಸಿಸುವವರು ಸಮುದ್ರದ ತಳದಲ್ಲಿ ಏನಿದೆ ಎಂದು ಕುತೂಹಲಿಗಳಾಗುವಂತೆ, ತಮ್ಮ ಸಾಧನೆಯನ್ನು ದೇಶಕಾಲನಿಮಿತ್ತಗಳಿಂದ ಆಚೆಗೆ ವಿಸ್ತರಿಸಿ ದರು. ಆಗ ಅವರ ವಯಸ್ಸು ಇಪ್ಪತ್ತೆಂಟು.

ಒಂದು ದಿನ ತೋತಾಪುರಿ ಎಂಬ ಒಬ್ಬ ಸಾಧು ದಕ್ಷಿಣೇಶ್ವರಕ್ಕೆ ಬಂದನು. ಆತ ಪಂಜಾಬ್ ದೇಶದವನು, ತರಬೇತಿಯಿಂದ ಅದ್ವೈತ ವೇದಾಂತಿ. ಬ್ರಹ್ಮವೊಂದೇ ಆತನ ಪಾಲಿಗೆ ಸತ್ಯ; ಉಳಿದುದೆಲ್ಲ ಮಿಥ್ಯವಾಗಿತ್ತು. ಬಿಸಿಲು ಗಾಳಿಗಳನ್ನು ಲೆಕ್ಕಿಸದೆ ಭಿಕ್ಷೆಯಿಂದ ಜೀವಿಸುತ್ತಿದ್ದನು. ಪರಿವ್ರಾಜಕ ಸಂನ್ಯಾಸಿಯಾಗಿದ್ದ ಆತ ಎಲ್ಲಿಯೂ ಮೂರು ದಿನಗಳಿಗಿಂತ ಹೆಚ್ಚು ನಿಲ್ಲುತ್ತಿರಲಿಲ್ಲ. ಅದ್ವೈತ ಸಾಧನೆಯಲ್ಲಿ ನಿರ್ವಿಕಲ್ಪ ಸಮಾಧಿಸ್ಥಿತಿಯನ್ನು ಮುಟ್ಟಿ ದ್ದರೂ ಪ್ರತಿದಿನ ತಪ್ಪದೆ ಧ್ಯಾನ ಮಾಡುತ್ತಿದ್ದನು. ಕಠಿಣ ಸಾಧನೆಯ ನಂತರ ಉಳಿದ ಕಾಲವನ್ನು ತೀರ್ಥಯಾತ್ರೆಯಲ್ಲಿ ಕಳೆಯುತ್ತ ಮಾರ್ಗಮಧ್ಯದಲ್ಲಿ ದಕ್ಷಿಣೇಶ್ವರಕ್ಕೆ ಬಂದಿದ್ದನು. ದೇವ ಸ್ಥಾನದ ಮೆಟ್ಟಿಲಿನ ಮೇಲೆ ಕುಳಿತಿದ್ದ ರಾಮಕೃಷ್ಣರನ್ನು ಕಂಡನು. ಅದ್ಭುತ ತೇಜಸ್ಸಿನಿಂದ ಕೂಡಿ ಬಹಳ ಮುಂದುವರಿದ ಸಾಧಕ ರಂತೆ ಕಂಡ ರಾಮಕೃಷ್ಣರತ್ತ ತೋತಾಪುರಿ ಆಕರ್ಷಿತನಾದನು. ಅವರ ಬಳಿ ಸಾರಿ, "ನೀನು ವೇದಾಂತವನ್ನು ಕಲಿಯಲು ಇಚ್ಛಿಸುವೆಯಾ?"ಎಂದು ಕೇಳಿದನು. "ತಾಯಿ ಒಪ್ಪಿದರೆ ನಾನು ಸಿದ್ಧ" ಎಂದು ರಾಮಕೃಷ್ಣರು ಹೇಳಿದರು. ಈ ಹುಡುಗ ಬಹುಶಃ ತನ್ನ ಹೆತ್ತ ತಾಯಿಯನ್ನು ಕೇಳಬಹುದೆಂದು ಭಾವಿಸಿ ತೋತಾ ಪುರಿ, "ಬೇಗ ಕೇಳಿಕೊಂಡು ಬಾ, ನಾನು ಹೆಚ್ಚು ಸಮಯ ಇಲ್ಲಿ ಇರುವುದಿಲ್ಲ" ಎಂದು ಹೇಳಿದನು. ಆದರೆ ರಾಮಕೃಷ್ಣರು ಕಾಳಿಮಂದಿರಕ್ಕೆ ಧಾವಿಸಿದುದನ್ನು ಕಂಡು, ಅದ್ವೈತ ಸಾಧನೆ ಮಾಡಿದ ಮೇಲೆ ಈ ಭ್ರಾಂತಿ ಬಿಟ್ಟುಹೋಗುವುದೆಂದು ಭಾವಿಸಿ ದನು. "ನಿನಗೆ ವೇದಾಂತವನ್ನು ಬೋಧಿಸುವುದಕ್ಕಾಗಿಯೇ ಅವನು ಬಂದಿರುವನು. ನೀನು ಅವನಿಂದ ಕಲಿ" ಎಂದು ತಾಯಿ ಕಾಳಿ ಹೇಳಿದ ಮೇಲೆ ರಾಮಕೃಷ್ಣರು ಆನಂದದಿಂದ ತೋತಾಪುರಿಯ ಬಳಿಗೆ ಹೋದರು.

## ಅದ್ವೈತ ಸಾಧನೆ

ಒಂದು ಗೊತ್ತಾದ ದಿನ ತೋತಾಪುರಿ ಶ್ರೀರಾಮಕೃಷ್ಣರಿಗೆ ಸಂನ್ಯಾಸದೀಕ್ಷೆಯನ್ನು ಕೊಟ್ಟನು, ವೇದಾಂತ ತತ್ತ್ವದ ಸಾರವನ್ನು ಬೋಧಿಸಿದನು. ನೀನೇ ಸಚ್ಚಿದಾನಂದ ಬ್ರಹ್ಮ ಎಂದು ಹೇಳಿ ಪರಬ್ರಹ್ಮನ ಮೇಲೆ ಧ್ಯಾನಿಸುವಂತೆ ಹೇಳಿದನು. ಶ್ರೀರಾಮ ಕೃಷ್ಣರಿಗೆ, ಮನಸ್ಸಿನಿಂದ ಎಲ್ಲವನ್ನೂ ತೆಗೆದುಹಾಕಿದರೂ ಕಾಳೀ ಮಾತೆಯ ಸುಂದರ ವದನಾರವಿಂದವನ್ನು ತೆಗೆದುಹಾಕಲು ಸಾಧ್ಯವಾಗಲಿಲ್ಲ. ಇದನ್ನು ಒಪ್ಪದ ತೋತಾಪುರಿ, ಏಕೆ ಸಾಧ್ಯ ವಿಲ್ಲವೆಂದು ಗರ್ಜಿಸಿ, ಅಲ್ಲಿಯೇ ಬಿದ್ದಿದ್ದ ಗಾಜಿನ ಒಂದು ಚೂರನ್ನು ರಾಮಕೃಷ್ಣರ ಹುಬ್ಬುಗಳ ಮಧ್ಯೆ ಚುಚ್ಚಿ, "ಇದರ ಮೇಲೆ ಧ್ಯಾನಿಸು; ಕಾಳಿಮಾತೆಯ ನಾಮರೂಪಗಳನ್ನು ಜ್ಞಾನಖಡ್ಗ ದಿಂದ ಛೇದಿಸು" ಎಂದು ಹೇಳಿದನು. ಹಾಗೆ ಮಾಡಿದಾಗ ಶ್ರೀರಾಮಕೃಷ್ಣರ ಮನಸ್ಸು ನಿರ್ವಿಕಲ್ಪ ಸಮಾಧಿಯಲ್ಲಿ ಲಯ ವಾಯಿತು.

ಎಲ್ಲಿಯೂ ಮೂರು ದಿನಗಳಿಗಿಂತ ಹೆಚ್ಚು ಕಾಲ ನಿಲ್ಲದ ತೋತಾಪುರಿ ಶ್ರೀರಾಮಕೃಷ್ಣರ ಆಕರ್ಷಣೆಯಿಂದ ಹನ್ನೊಂದು ತಿಂಗಳು ದಕ್ಷಿಣೇಶ್ವರದಲ್ಲಿ ಇದ್ದನು. ಶ್ರೀರಾಮಕೃಷ್ಣರಿಗೆ ವೇದಾಂತ ದೀಕ್ಷೆಯನ್ನಿತ್ತು ಅವರಿಂದ ಭಕ್ತಿದೀಕ್ಷೆಯನ್ನು ಪಡೆದುಕೊಂಡು ಸಾಧನಾಜೀವನದಲ್ಲಿ ಪರಿಪೂರ್ಣತೆಯನ್ನು ಗಳಿಸಿಕೊಂಡು, ಧನ್ಯತೆಯಿಂದ ದಕ್ಷಿಣೇಶ್ವರದಿಂದ ಹೊರಟುಹೋದನು.

## ಗೋವಿಂದರಾಯ್

ಶ್ರೀರಾಮಕೃಷ್ಣರು ತೋತಾಪುರಿಯ ನಿರ್ಗಮನದ ನಂತರ ಆರು ತಿಂಗಳು ಸತತವಾಗಿ ನಿರ್ವಿಕಲ್ಪಸಮಾಧಿಯ ಅನುಭವದಲ್ಲೇ ಇದ್ದರು. ಎಲ್ಲ ಪಥಗಳೂ ಒಂದೇ ಪರಬ್ರಹ್ಮದ ಕಡೆಗೆ ಹೋಗುವ ಮಾರ್ಗಗಳು ಎಂಬುದನ್ನು ಮನಗಂಡರು. ಇಸ್ಲಾಂ ಧರ್ಮವೂ ಭಗವಂತನ ಸಾಕ್ಷಾತ್ಕಾರಕ್ಕೆ ಒಂದು ಮಾರ್ಗವಾಗಿರುವುದರಿಂದ, ಅದರ ಮೂಲಕ ಭಗವಂತ ಹೇಗೆ ಕಾಣುತ್ತಾನೆ ಎಂಬುದನ್ನು ನೋಡಲು ಇಚ್ಛಿಸಿದರು.

ಒಮ್ಮೆ ಗೋವಿಂದರಾಯ್ ಎಂಬ ಭಕ್ತನೊಬ್ಬನು ಸಾಧನೆ ಮಾಡಲು ದಕ್ಷಿಣೇಶ್ವರದ ಪ್ರಶಾಂತ ವಾತಾವರಣಕ್ಕೆ ಬಂದನು. ಆತ ಬಂಗಾಳಿ ಕ್ಷತ್ರಿಯ. ಮಹಮ್ಮದೀಯ ಧರ್ಮದ ಸೂಫಿ ಪಂಗಡಕ್ಕೆ ಮನಸೋತು ಅದರ ಪ್ರಕಾರ ಉಪಾಸನೆಯನ್ನು ಮಾಡುತ್ತಿದ್ದನು. ಈತನ ಶ್ರದ್ಧಾಭಕ್ತಿಗೆ ಶ್ರೀರಾಮಕೃಷ್ಣರು ಮೆಚ್ಚಿದರು. ತಾವು ಇಸ್ಲಾಂ ಧರ್ಮದ ಸಾಧನೆಯನ್ನು ಮಾಡಬೇಕೆಂಬ ಅಪೇಕ್ಷೆಯನ್ನು ಆತನಿಗೆ ತಿಳಿಸಿದಾಗ ಅವನು ದೀಕ್ಷೆಯನ್ನು ಕೊಟ್ಟನು. ಶ್ರೀರಾಮಕೃಷ್ಣರು ಮುಸಲ್ಮಾನರಂತೆ ಉಡುಪು ತೊಟ್ಟರು, ಆಹಾರ ತೆಗೆದುಕೊಂಡರು ಮತ್ತು ನಮಾಜು ಮಾಡಿದರು. ದೇವಸ್ಥಾನಕ್ಕೆ ಹೋಗುವುದನ್ನು ಬಿಟ್ಟರು. ಮೂರು ದಿನಗಳ ಸಾಧನೆಯ ನಂತರ, ನೀಳವಾದ ಗಡ್ಡವುಳ್ಳ ಗಂಭೀರ ಆಕೃತಿಯ ಪುರುಷನೊಬ್ಬನನ್ನು ಕಂಡರು. ಅವರ ಮನಸ್ಸು ನಿರ್ಗುಣ ನಿರಾಕಾರದಲ್ಲಿ ಲೀನವಾಯಿತು. ಇಸ್ಲಾಂ ಧರ್ಮದ ಸಾಕ್ಷಾತ್ಕಾರವಾಯಿತು. ಶ್ರೀರಾಮಕೃಷ್ಣರು ಗುರುಗಳಿಂದ ವಿಧಿವತ್ತಾಗಿ ದೀಕ್ಷೆಯನ್ನು ಪಡೆದು ಮಾಡಿದ ಸಾಧನೆ ಬಹುಶಃ ಇದೇ ಕೊನೆಯದು.

## ಶಂಭುಚರಣ ಮಲ್ಲಿಕ

ನಂತರ ಅವರಿಗೆ ಶಂಭುಚರಣ ಮಲ್ಲಿಕ ಎಂಬುವನ ಪರಿಚಯವಾಯಿತು. ಅವನು ಹಿಂದುವಾದರೂ ಬೈಬಲ್ಲನ್ನು ಚೆನ್ನಾಗಿ ಓದಿದ್ದ ಮತ್ತು ಏಸುಕ್ರಿಸ್ತನ ಭಕ್ತನಾಗಿದ್ದ. ಅವನಿಂದ ಬೈಬಲ್ಲನ್ನು ಓದಿಸಿ ಕೇಳುತ್ತಿದ್ದಂತೆ ರಾಮಕೃಷ್ಣರಿಗೆ ಕ್ರಿಸ್ತನ ಮೇಲೆ ಭಕ್ತಿಯುಂಟಾಯಿತು. ಒಮ್ಮೆ ಶಂಭುಚರಣನ ಮನೆಯಲ್ಲಿ ಮಗು ಕ್ರಿಸ್ತನನ್ನು ಎತ್ತಿಕೊಂಡು ನಿಂತಿರುವ ಮಾತೆ ಮೇರಿಯ ಪಟವನ್ನು ನೋಡುತ್ತಿದ್ದಂತೆ ಮೇರಿ ಮತ್ತು ಕ್ರಿಸ್ತನ ಕಾಂತಿಯ ಕಿರಣಗಳು ಅವರೆಡೆಗೆ ಬಂದವು. ಅವರ ಮನಸ್ಸು ಕ್ರಿಸ್ತನ ಭಾವನೆಯಿಂದ ತುಂಬಿ ಹೋಯಿತು. ದಕ್ಷಿಣೇಶ್ವರದ ಅವರ ಕೊಟಡಿಗೆ ಬಂದ ಮೇಲೆ ಕಾಳೀಮಾತೆಯ ಗುಡಿಗೆ ಹೋಗಲಿಲ್ಲ. ಮೂರು ದಿನಗಳಾದ ಬಳಿಕ ಪಂಚವಟಿಯ ಕಡೆ ಹೋಗುತ್ತಿದ್ದಾಗ ಪರಮ ಸತ್ವಗುಣದಿಂದ ಶೋಭಿಸುತ್ತಿದ್ದ ಪ್ರಶಾಂತಮೂರ್ತಿಯೊಂದು ಶ್ರೀರಾಮಕೃಷ್ಣರನ್ನೇ ನೋಡುತ್ತ ಅವರೆಡೆಗೆ ಬಂದಿತು. ಅದು ಬೇರೆ ದೇಶದವರಂತೆ ಕಂಡಿತು. ಕಣ್ಣುಗಳು ಮನೋಹರವಾಗಿದ್ದು ಮೂಗು ಸ್ವಲ್ಪ ಚಪ್ಪಟೆಯಾಗಿದ್ದು ಸುಂದರವಾಗಿತ್ತು. ಈತ ಯಾರಿರ ಬಹುದೆಂದು ನೋಡುತ್ತಿದ್ದಂತೆ ಆಕೃತಿ ಅವರಲ್ಲಿ ಐಕ್ಯವಾಯಿತು. ಆತನೇ ಯೋಗೀಶ್ವರನಾದ ಕ್ರಿಸ್ತ.

## ಉಪಸಂಹಾರ

ಶ್ರೀರಾಮಕೃಷ್ಣರ ಗುರುಗಳೆಲ್ಲರೂ ಸತ್ಯನಿಷ್ಠರು, ಪವಿತ್ರಾತ್ಮರು, ಶ್ರೇಷ್ಠ ಸಾಧಕರು, ಮತ್ತು ಆಧ್ಯಾತ್ಮಿಕ ಧೀರರು. ಶಿಷ್ಯನ ಮೇಲ್ಮೆಗಾಗಿ ಎಂತಹ ಕಷ್ಟವನ್ನಾದರೂ ಸಹಿಸಲು ಸಿದ್ಧರಾಗಿದ್ದವರು. ಶಿಷ್ಯನ ಅಸಾಧಾರಣ ಅನುಪಮ ಸಿದ್ಧಿಯನ್ನು ನೋಡಿ ಸಂತೋಷ ಪಟ್ಟರು. ಶಿಷ್ಯನ ಮೇಲೆ ಅವರ ಪ್ರೀತಿ ಅಪಾರ. ಶಿಷ್ಯ ವಯಸ್ಸಿ ನಲ್ಲಿ ಬಹಳ ಕಿರಿಯನಾಗಿದ್ದರೂ ಅವನ ಮೂಲಕ ದೊರೆತ ಜ್ಞಾನವನ್ನು ಕೃತಜ್ಞತೆಯಿಂದ ಸ್ವೀಕರಿಸಿ ತಮ್ಮ ನ್ಯೂನತೆಗಳನ್ನು ನಿವಾರಿಸಿಕೊಂಡು, ಪರಿಪೂರ್ಣತೆಯನ್ನು ಪಡೆದು ಧನ್ಯತೆ ಯಿಂದ ಹೋಗುವುದನ್ನು ನೋಡಿದಾಗ ಅವರ ಹೃದಯ ವೈಶಾಲ್ಯತೆ ನಮ್ಮ ಮನಸ್ಸನ್ನು ತಾಕದಿರದು. ಶ್ರೀರಾಮಕೃಷ್ಣರದು ಆದರ್ಶ ಶಿಷ್ಯತ್ವ, ಕಲಿಯಲು ಅವರು ಸದಾ ಸಿದ್ಧರಾಗಿರುವರು. ಗುರುಗಳ ಆದೇಶವನ್ನು ಶಿರಸಾವಹಿಸಿ ಪಾಲಿಸುವರು. ಆದರ್ಶ ಗುರು ಮತ್ತು ಆದರ್ಶ ಶಿಷ್ಯ ಸೇರಿದಾಗ ಶ್ರೇಷ್ಠಜ್ಞಾನ ಉದಯಿ ಸುವುದು ಎಂಬ ಉಪನಿಷತ್ತಿನ ವಾಕ್ಯವನ್ನು ಶ್ರೀರಾಮಕೃಷ್ಣರ ಗುರುಗಳ ವೃತ್ತಾಂತವು ನಮ್ಮ ನೆನಪಿಗೆ ತರುವುದಲ್ಲವೆ?